# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 15-03-2021 ಪ್ರಶ್ನೆ ಸಂಖ್ಯೆ : 959(959)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 15-03-2021

ಉತ್ತರಿಸುವ ಸಚಿವರು: ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ವಿಷಯ : 01.08.2008ರ ನಂತರದವರಿಗೆ ವಿಶೇಷ ಭತ್ಯೆ ಒದಗಿಸುವುದು

(ಅ) 01.08.2008ರನಂತರ ನೇರ ನೇಮಕಾತಿ ಹೊಂದಿದ ಸರ್ಕಾರಿ/ ಅನುದಾನಿತ ಪ್ರೌಢಶಾಲಾ ಶಿಕ್ಷಕರು/ ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ವಿಶೇಷ ಭತ್ಯೆಯಿಂದ ವಂಚಿತರಾದವರಿಗೆ ವೇತನ ತಾರತಮ್ಯ ಸರಿಪಡಿಸಲು ಒಂದು ವಾರ್ಷಿಕ ಬಡ್ತಿ ನೀಡಲು ಕೈಗೊಂಡ ಕ್ರಮಗಳೇನು;

(ಆ) ಸದರಿ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರು/ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ವಿಶೇಷ ಭತ್ಯೆ ನ್ಯಾಯಯುತವಾಗಿ ನೀಡಬೇಕೆಂದು ಕೆ.ಎ.ಟಿ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಇದ್ದರೂ ನ್ಯಾಯ ನೀಡಲು ವಿಳಂಬಕ್ಕೆ ಕಾರಣಗಳೇನು;

(ಇ) ಈ ಸರ್ಕಾರಿ/ಅನುದಾನಿತ ಪ್ರೌಢಶಾಲಾ ಶಿಕ್ಷಕರು/ಮುಖ್ಯೋಪಾಧ್ಯಾಯರು ಹಾಗೂ ಪದವಿ ಪೂರ್ವ ಕಾಲೇಜು ಉಪನ್ಯಾಸಕರು ಪಡೆದ ವಿಶೇಷ ಭತ್ಯೆ ಮೊತ್ತವನ್ನು ಮರು ವಸೂಲಿ ಮಾಡಲು ಆದೇಶಗಳ ಮೂಲಕ ಒತ್ತಡ ಹಾಕಲಾಗುತ್ತಿರುವುದು ನಿಜವೇ;

(ಈ) ಕೆ.ಎ.ಟಿ, ಸರ್ವೋಚ್ಚ ನ್ಯಾಯಾಲಯದಿಂದ ಸಿ ಮತ್ತು ಡಿ ದರ್ಜೆ ನೌಕರರಿಗೆ ಒಮ್ಮೆ ಪಾವತಿಸಿದ ವೇತನ ಭತ್ಯೆಗಳನ್ನು ಮರು ವಸೂಲಿ ಮಾಡುವಂತಿಲ್ಲ ಎಂಬ ತೀರ್ಪು ಇದ್ದರೂ ಸದರಿ ನೌಕರರಿಂದ ಮರು ವಸೂಲಿ ಮಾಡಲು ಒತ್ತಡ, ವೇತನ ನಿಲುಗಡೆ ಹಾಗೂ 10, 15 ವರ್ಷಗಳ ಕಾಲಮಿತಿ ವೇತನ ಬಡ್ತಿಗಳನ್ನು ತಡೆಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?